ಚಿಕ್ಕಮಗಳೂರು ನಗರ ಸಭೆಗೆ ಸರ್ಕಾರದಿಂದ ಆಕ್ಟ್ರಾಯ್ ಅನುದಾನ ಬಿಡುಗಡೆ ಮಾಡುವ ಬಗ್ಗೆ.

೧೩೫. ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೯೧-೯೨ನೇ ಆರ್ಥಿಕ ವರ್ಷದಲ್ಲಿ ಚಿಕ್ಕಮಗಳೂರು ನಗರಸಭೆಗೆ ಸರ್ಕಾರದಿಂದ ಆಕ್ಟ್ರಾಯ್ ಅನುದಾನ (ಆಕ್ಟ್ರಾಯ್ ಗ್ರಾಂಟ್) ಬಿಡುಗಡೆ ಮಾಡಲಾಗಿದೆಯೇ?

ಆ) ಬಿಡುಗಡೆ ಮಾಡಿದ್ದಲ್ಲಿ ಯಾವ ಯಾವ ತ್ರೈಮಾಸದಲ್ಲಿ ಬಿಡುಗಡೆ ಮಾಡಲಾಗಿದೆ ಹಾಗೂ ಬಿಡುಗಡೆ ಮಾಡಿರುವ ಮೊತ್ತವೆಷ್ಟು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ)

ತ್ರೈಮಾಸಿಕ	ಬಿಡುಗಡೆ ಮಾಡಿದ ಮೊತ್ತ (ರೂ.)
ಏಪ್ರಿಲ್-ಜೂನ್ ೯೧	೬,೬೯,೦೧೭-೦೦
ಜುಲೈ-ಸೆಪ್ಟೆಂಬರ್ ೯೧	೬,೬೯,೦೧೭-೦೦
ಆಕ್ಟೋಬರ್-ಡಿಸೆಂಬರ್ ೯೧	೬,೬೯,೦೧೭-೦೦
ಜನವರಿ-ಮಾರ್ಚ್ ೯೨	ಶೀಘ್ರದಲ್ಲಿ ಬಿಡುಗಡೆ ಮಾಡಲಾಗುವುದು.

ಶ್ರೀ ಸಿ. ಆರ್. ಸಗೀರ್ ಅಹಮದ್:- ಸನ್ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ನಗರ ಸಭೆಗೆ ೧೯೯೧-೯೨ರಲ್ಲಿ ಆಕ್ಟ್ರಾಯ್ ಅನುದಾನ ಎಷ್ಟು ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದ್ದಕ್ಕೆ, ಉತ್ತರ ಕೊಟ್ಟಿದ್ದಾರೆ. ಇದು ಬಹುಶಃ ೧೯೮೧ನೇ ಸೆನ್ಸಸ್ ಪ್ರಕಾರವಾಗಿ ಈ ಹಣವನ್ನು ನಿಗದಿಪಡಿಸಿದ್ದೀರೋ ಅಥವಾ ಆಕ್ಟ್ರಾಯ್‌ಯನ್ನು ಮುನಿಸಿಪಾಲಿಟಿಯವರು ಸಂಗ್ರಹಿಸಿದ್ದಾರಲ್ಲಾ ಈ ಆಧಾರದ ಮೇಲೆ ನಿಗದಿಪಡಿಸಿದ್ದೀರೋ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಮತ್ತೆ ಇತರೇ ಮುನಿಸಿಪಾಲಿಟಿಗಳಿಗೂ ಮತ್ತು ಚಿಕ್ಕಮಗಳೂರು ಮುನಿಸಿಪಾಲಿಟಿಯವರಿಗೂ ಹೋಲಿಸಿದರೆ ಬಹುಶಃ ಈ ಅನುದಾನ ಚಿಕ್ಕಮಗಳೂರು ನಗರಸಭೆಗೆ ಕಡಿಮೆಯಾಗಿದೆ ಎಂದು ನನ್ನ ಭಾವನೆ. ಆದ್ದರಿಂದ, ಮಾನ್ಯ ಮಂತ್ರಿಗಳು ಇನ್ನು ಮುಂದಿನ ವರ್ಷಗಳಲ್ಲಾದರೂ ಇದಕ್ಕೆ ಜಾಸ್ತಿ ಅನುದಾನ ಬಿಡುಗಡೆ ಮಾಡುತ್ತೀರಾ ಎಂದು ಉಪ ಪ್ರಶ್ನೆಯನ್ನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪ ಸಭಾಧ್ಯಕ್ಷಣೆಯವರೇ, ಈ ಆಕ್ಟ್ರಾಯ್ ಕಾಂಪನ್‌ಸೇಷನ್ ಅನ್ನು ಆಕ್ಟ್ರಾಯ್ ಅಬಾಲಿಷ್ ಮಾಡಿದಂಥ ಟೈಮ್‌ನಲ್ಲಿ ಅವರಿಗೆ ಏನು ಆಕ್ಟ್ರಾಯಿ ಇನ್‌ಕಂ ಬರುತ್ತಿತ್ತೋ, ಅದರ ಆಧಾರದ ಮೇಲೆ ನಾವು ಕೊಡುತ್ತಿದ್ದೇವೆ. ಆ ಆಧಾರದ ಮೇಲೆ ಚಿಕ್ಕಮಗಳೂರು ಮುನಿಸಿಪಾಲಿಟಿಗೆ ಒಂದು ಕ್ವಾರ್ಟರ್‌ಗೆ ೬ ಲಕ್ಷ ೬೯ ಸಾವಿರ ಬರುತ್ತಿದೆ. ಮತ್ತು ನಾನು ಉತ್ತರದಲ್ಲಿ ಹೇಳಿದ ಹಾಗೆ ಒಂದೇ ಕ್ವಾರ್ಟರ್‌ಗೆ ಸಂಭಂಧಪಟ್ಟಂತೆ ಹಣ ಮಾತ್ರ ಇನ್ನೂ ಹಣ ರಿಲೀಸ್ ಮಾಡಲಿಕ್ಕೆ ಇದೆ. ಅದು ಏಪ್ರಿಲ್ ತಿಂಗಳಲ್ಲಿ ರಿಲೀಸ್ ಆಗುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಇದೇ ರೀತಿಯಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಶಿವಮೊಗ್ಗಕ್ಕೆ ಬಂದಾಗಲೂ ಕೂಡಾ ಡೆವಲಪ್‌ಮೆಂಟ್ ಚಾರ್ಜಸ್ ಬಗ್ಗೆ ಕೇಳಿದ್ದೆವು. ರಸ್ತೆಗಳೆಲ್ಲಾ ಹಾಳಾಗಿ ಹೋಗಿಬಿಟ್ಟಿದೆ. ಒಂದು ಕೋಟಿ ರೂಪಾಯಿಗಳನ್ನು ಈ ಬಗ್ಗೆ ಕೊಡುವ ವಿಚಾರದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದರು. ಆದರೆ ಇವೊತ್ತಿನವರೆಗೆ ಡೆವಲಪ್‌ಮೆಂಟ್ ಚಾರ್ಜ್ ಬಗ್ಗೆ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ರಸ್ತೆಗಳು ತುಂಬಾ ಕೆಟ್ಟಿವೆ. ದಯವಿಟ್ಟು ಇದಕ್ಕೆ ಆಶ್ವಾಸನೆಯಂತೆ ಮಾಡಲು ಪ್ರಯತ್ನ ಮಾಡುವರೇ ಎಂದು ಕೇಳಬಯಸುತ್ತೇನೆ

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಸದಸ್ಯರು ಚಿಕ್ಕಮಗಳೂರಿಗೆ ಸಂಬಂಧಪಟ್ಟಂಥ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ಮಾನ್ಯ ಈಶ್ವರಪ್ಪನವರು ಶಿವಮೊಗ್ಗಕ್ಕೆ ಸಂಬಂಧಪಟ್ಟದ್ದನ್ನು ಕೇಳುತ್ತಿದ್ದಾರೆ. ದಯಮಾಡಿ ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರಿಸಬಹುದು ಎಂದು ಹೇಳ ಬಯಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ:- ಮುಖ್ಯ ಮಂತ್ರಿಗಳೂ ಇಲ್ಲಿಯೇ ಇದ್ದಾರೆ. ಅವರು ಬಸ್‌ಸ್ಟ್ಯಾಂಡ್ ಉದ್ಘಾಟನೆಗೆ ಬಂದಾಗ ನಮಗೆಲ್ಲಾ ಸಂತೋಷವಾಗುವ ರೀತಿಯಲ್ಲಿ ಭರವಸೆಯನ್ನು ಕೊಟ್ಟಿದ್ದರು. ಆ ಬಗ್ಗೆ ಸ್ವಲ್ಪ ಹಣವನ್ನಾದರೂ ಬಿಡುಗಡೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು:- ಈ ಪ್ರಶ್ನೆಗೆ ಸಂಬಂಧಪಟ್ಟಿದ್ದು ಅಲ್ಲ. ದಯಮಾಡಿ ಕುಳಿತುಕೊಳ್ಳಿ.

ಉನ್ನತಾಧಿಕಾರಿ ಸಮಿತಿಯ ರಚನೆ ಬಗ್ಗೆ

೨೨೪೧. ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉನ್ನತಾಧಿಕಾರ ಸಮಿತಿಯನ್ನು ರಚಿಸಿದ ಉದ್ದೇಶವೇನು? ಇದರಿಂದ ಹರಿಜನ ನೌಕರ ವರ್ಗದವರಿಗೆ ನ್ಯಾಯ ದೊರಕಿದೆಯೇ?

ಆ) ಉನ್ನತಾಧಿಕಾರ ಸಮಿತಿಯು ಎಷ್ಟು ಬಾರಿ ಈ ಎರಡು ವರ್ಷದಲ್ಲಿ ಸೇರಿದೆ? ಈ ಸಮಿತಿಗಳಲ್ಲಿ ತೆಗೆದುಕೊಂಡ ತೀರ್ಮಾನವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) ಸರ್ಕಾರಿ ಸೇವೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ಮೊಸಲಾತಿ ಆದೇಶಗಳನ್ನು ಪ್ರಾಮಾಣಿಕವಾಗಿ ಜಾರಿಗೆ ಕೊಡುವುದನ್ನು ವೀಕ್ಷಿಸಲು ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಯಿತು. ಇದರಿಂದ ಹರಿಜನ-ಗಿರಿಜನ ನೌಕರರಿಗೆ ಖಂಡಿತವಾಗಿಯೂ ನ್ಯಾಯ ದೊರಕಿದೆ.

ಆ) ಉನ್ನತ ಮಟ್ಟದ ಸಮಿತಿಯು ಕಳೆದೆರಡು ವರ್ಷಗಳಲ್ಲಿ ಸಭೆ ಸೇರಿಲ್ಲ. ಈ ಸಮಿತಿಗಳಲ್ಲಿ ತೆಗೆದುಕೊಂಡ ತೀರ್ಮಾನದನುಸಾರ ಸರ್ಕಾರ ಈ ಕೆಳಕಂಡಂತೆ ಕ್ರಮ ಕೈಗೊಂಡಿದೆ:-

೧) ಮೀಸಲಾತಿ ರೋಸ್ಟರ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನಗಳನ್ನು ಪರಿಶಿಷ್ಟ ಜಾತಿ/